ಸರಕಾರದ ಗಮನಕ್ಕೆ ಬಂದಿದೆಯೇ? ಹಾಗಾದಲ್ಲಿ ಇದರ ಇದರ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಅ) ಧಾರವಾಡ-ಹುಬ್ಬಳ್ಳಿ ಮಹಾನಗರದಲ್ಲಿ ಎಷ್ಟು ಕೆರೆಗಳು ಇವೆ? ಅವುಗಳ ಅಭಿವೃದ್ಧಿಯಿಂದ ಜಲಪಾತ ಹೆಚ್ಚಿ ಬೋರ್‌ವೆಲ್‌ಗಳಿಗೆ ನೀರು ಬರುವಂತೆ ಸರ್ಕಾರ ಕ್ರಮ ತೆಗೆದುಕೊಂಡಿದೆ?

ಇ) ಧಾರವಾಡದ ಗಾರ್ಬೆಜ್ (ಕೊಳಚೆ)ಯನ್ನು ಹಿರೇಕೇರಿಯ ಮೇಲೆ ಹಾಕುವುದರಿಂದ ಕೇರಿಯ ಹುಳು ತುಂಬಿ ಪರಿಸರ ಹಾಳಾಗಿದೆ? ಈ ಬಗ್ಗೆ ಮಹಾನಗರಸಭೆ ಯಾವ ಕ್ರಮ ತೆಗೆದುಕೊಂಡಿದೆ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) ಹೌದು. ಮಹಾನಗರ ಪಾಲಿಕೆಯ ಆಯವ್ಯಯದಲ್ಲಿ ವಿವಿಧ ಮೂಲಭೂತ ಸೌಕರ್ಯಗಳ ಕುರಿತು ಹಣಾವಕಾಶ ಮಾಡಲಾಗಿದ್ದು ಅವುಗಳ ಲಭ್ಯತೆಗನುಗುಣವಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಆ) 8 ಕೆರೆಗಳು ಇವೆ. ಇವುಗಳಲ್ಲಿ ಧಾರವಾಡದ ಹಿರೇಕೆರೆಯನ್ನು ಅಭಿವೃದ್ಧಿಪಡಿಸಲು ಕೈಗೆತ್ತಿಕೊಳ್ಳಲಾಗಿದೆ.

ಇ) 1) ಕ್ಯಾಚ್‌ಮೆಂಟ್ ಏರಿಯಾದಿಂದ ಬರುವ ಗ್ರಾಮ ಸಾರವು ಕೆರೆಯನ್ನು ಸೇರದಂತೆ ಕಚ್ಚಾ ಗಟಾರ ತೆಗೆದು ಪ್ರತ್ಯೇಕಿಸಲಾಗಿದೆ.

2) ಗ್ರಾಮಸಾರ ಹೆಚ್ಚಾಗಿ ಕೆರೆಯನ್ನು ಸೇರದಂತೆ ಮಣ್ಣಿನ ಒಡ್ಡನ್ನು ನಿರ್ಮಿಸಿ ಕಲ್ಲಿನ ಪಿಚ್ಚಿಂಗ್ ಮಾಡಲಾಗಿದೆ.

3) ಮೇಲ್ಭಾಗದಿಂದ ಬರುವ ಗ್ರಾಮಸಾರವನ್ನು ಕೊಳವೆಗಳ ಮುಖಾಂತರ ಕೆರೆಯಿಂದ ಹೊರಕ್ಕೆ ನೇರವಾಗಿ ಸಾಗಿಸುವಂತೆ ರೂ. 11 ಲಕ್ಷ ಅಂದಾಜು ಮೊತ್ತದ ಒಳಚರಂಡಿ ಕೊಳವೆ ಹಾಕುವ ಕಾಮಗಾರಿಗಳಿಗೆ ಆಡಳಿತಾತ್ಮಕ ಮಂಜೂರಿ ನೀಡಲಾಗಿದೆ.

4) ಹಿರೇಕೆರೆಯ ಮೇಲ್ಭಾಗದಲ್ಲಿ ಸದ್ಯಕ್ಕೆ ಸಂಗ್ರಹವಾಗುತ್ತಿರುವ ಕಸವನ್ನು ಸಂಪೂರ್ಣವಾಗಿ ನಿಲ್ಲಿಸಿ ಅದನ್ನು ಸ್ಥಳಾಂತರಿಸಲು ಧಾರವಾಡ ನಗರದ ಹೊರವಲಯದಲ್ಲಿ ಕ್ಯಾರಕೊಪ್ಪ ಗ್ರಾಮದ ಹತ್ತಿರ 9 ಎಕರೆ ಜಮೀನನ್ನು ಪಡೆದುಕೊಂಡು ಅಭಿವೃದ್ಧಿಪಡಿಸಲಾಗುವುದು.

ಮಹಾನಗರಗಳ ರಸ್ತೆ ಮತ್ತು ಒಳಚರಂಡಿ ಅಭಿವೃದ್ಧಿ

4737 - ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ (ಧಾರವಾಡ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಧಾರವಾಡವನ್ನು ಕರ್ನಾಟಕದ ಎರಡನೇ ಮಹಾನಗರವೆಂದು ಸರ್ಕಾರ ಗುರುತಿಸಿದೆಯೆ? ಹಾಗಾದಲ್ಲಿ ಬೆಳೆಯುತ್ತಿರುವ ಮಹಾನಗರದ ರಸ್ತೆಗಳು ಮತ್ತು ಒಳಚರಂಡಿ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಲಾಗಿದೆಯೆ?

ಆ) ಬೆಂಗಳೂರು ಮಹಾನಗರ ಪಾಲಿಕೆ ಪ್ರತಿ ವರ್ಷ ನೀಡುತ್ತಿರುವ ಅನುದಾನವೆಷ್ಟು? ಫ್ಲೈಓವರ್ ಸಿಂಗಾಪುರ ನಗರದಂತೆ ಪರಿವರ್ತಿಸಲು ನೀಡಿರುವ ಹಣವೆಷ್ಟು?

ಇ) ಹುಬ್ಬಳ್ಳಿ ಧಾರವಾಡದ ಅಭಿವೃದ್ಧಿ ದೃಷ್ಟಿಯಿಂದ ಹೆಚ್ಚಿನ ಮಾರ್ಗ ಸಮೀಕ್ಷೆ ಹೊರವಲಯದ ರಚನೆ ಮತ್ತು ವರ್ತುಲ ರಸ್ತೆಯ ಯೋಜನೆ ಹಾಗೂ ಎರಡು ನಗರಗಳ ಮಧ್ಯದಲ್ಲಿ ಜೋಡು ರಸ್ತೆ ನಿರ್ಮಿಸುವ ಯೋಜನೆ ಕೈಗೊಳ್ಳಲು ಸರ್ಕಾರ ತೀರ್ಮಾನಿಸಿದೆಯೇ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) ಹೌದು, ಆದರೆ ಸರ್ಕಾರದಿಂದ ಯಾವುದೇ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. ಸರ್ಕಾರದ ಗ್ಯಾರಂಟಿಯ ಆಧಾರದ ಮೇಲೆ ಹುಡ್ಕೋ ಸಂಸ್ಥೆಯಿಂದ ರೂ. 200 ಲಕ್ಷಗಳ ಸಾಲವನ್ನು ಒದಗಿಸಲಾಗಿರುತ್ತದೆ.

ಆ) ಸರ್ಕಾರವು 1999-2000ನೇ ಸಾಲಿನಲ್ಲಿ ಬೆಂಗಳೂರು ಮಹಾ ನಗರಪಾಲಿಕೆಗೆ ರೂ.90,23,62,000-00 ಅನುದಾನ ನೀಡಿರುತ್ತದೆ. ಸರ್ಕಾರವು ಫ್ಲೈಓವರ್ ಸಿಂಗಾಪುರ್ ನಗರದಂತೆ ಪರಿವರ್ತಿಸಲು ಯಾವುದೇ ಅನುದಾನ ನೀಡಿರುವುದಿಲ್ಲ.

ಇ) ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರವು ಈಗಾಗಲೇ ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆಯನ್ನು ಅವಳಿ ನಗರಗಳಿಗೆ ತಯಾರಿಸಲು ಕ್ರಮ ಕೈಗೊಳ್ಳುತ್ತಿದೆ. ಈಗಾಗಲೇ ಜಮೀನಿನಲ್ಲಿ ಬಂದಂತಹ ಹಾಲಿ ಬೆಳೆವಣಿಗೆಗಳನ್ನು ಗುರುತಿಸುವ ಕಾರ್ಯಕ್ರಮವನ್ನು ಕೈಗೊಂಡಿರುತ್ತದೆ. ಸನ್ 1997 ರವರೆಗೆ ಬಂದಂತಹ ಹಾಲಿ ಬೆಳೆವಣಿಗೆಗಳನ್ನು ಈಗಾಗಲೇ ನಂತರ ಸನ್ 2000 ಇಸ್ವಿಯವರೆಗೆ ಬಂದಂತಹ ಬೆಳೆವಣಿಗೆಗಳನ್ನು ನಕ್ಷೆಯಲ್ಲಿ ತೋರಿಸಿದೆ. ಕಾಲೋಚಿತಗೊಳಿಸಲು ಮೋಜಣಿ ಪ್ರಾರಂಭಿಸಲಾಗಿದೆ.

ಪರಿಷ್ಕೃತ ವ್ಯಾಪಕಾಭಿವೃದ್ಧಿಯನ್ನು ಸನ್ 2004ನೇ ಇಸ್ವಿಯಲ್ಲಿ ಪೂರ್ತಿಗೊಳಿಸಲು ಉದ್ದೇಶಿಸಲಾಗಿದೆ. ಅವಳಿ ನಗರಗಳಿಗೆ ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿ ವಿವಿಧ ಉದ್ದೇಶಗಳಿಗೆ ಬೇಕಾಗಿರುವ ಜಾಗಗಳನ್ನು ಕಾಯ್ದಿರಿಸಲಾಗುತ್ತಿದೆ. ಸದರಿ ಯೋಜನೆಯು ಮುಂದಿನ ಇಪ್ಪತ್ತು ವರ್ಷಗಳವರೆಗೆ ಎಂದು ಪರಿಗಣಿಸಿ ಯೋಜನೆಯನ್ನು ಹೊರವಲಯದ ರಚನೆ ಮತ್ತು ವರ್ತುಲ ರಸ್ತೆಯ ನಿರ್ಮಿಸುವ ಯೋಜನೆಯನ್ನು ಸಹ ಉದ್ದೇಶಿಸಲಾಗುವುದು. ಈಗ ಹಾಲಿ ಇರುವ ಅವಳಿ ನಗರಗಳ ಮಧ್ಯದ ರಾಷ್ಟ್ರೀಯ ಹೆದ್ದಾರಿಯಾಗಿರುತ್ತದೆ. ಅವಳಿ ನಗರಗಳಿಗೆ ವರ್ತುಲ ರಸ್ತೆಯ ಕಾರ್ಯವನ್ನು ಪರಿಷ್ಕೃತ ವ್ಯಾಪಕಾಭಿವೃದ್ಧಿ ಅನುಮೋದಿಸಿ ತದನಂತರ ಪ್ರಾರಂಭಿಸಲಾಗುವುದು.